**ಸಾಕ್ಷಿಯನ್ನು ದಿನಾಂಕ 23.04.2026 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಟಿ ಎನ್ ಎಸ್ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ಯವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ಈ ಹಿಂದೆ ಸಲ್ಲಿಸಿದ ಒ ಎಸ 241/2011 ನ್ನು ವಾಪಸ್ಸು ತೆಗೆದುಕೊಂಡ ಸಮಯದಲ್ಲಿ 2 ಸಾವಿರ ಹಣವನ್ನು ಡೆಪಾಸಿಟ್ ಮಾಡಬೇಕೆಂದು ಆದೇಶ ಆಗಿತ್ತು ಎಂದರೆ ಸರಿ. ನಾನು ಸದರಿ ಹಣವನ್ನು ಡೆಪಾಸಿಟ್ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಡಲು ದಾಖಲಾತಿ ಇಲ್ಲ. ಒ ಎಸ್ 241/2011 ಸಲ್ಲಿಸಿದ್ದಂತಹ ಮಾರ್ಕೆಟ ವ್ಯಾಲ್ಯೂ ಅನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಈಗ ಮಾರ್ಕೇಟ್ ವ್ಯಾಲ್ಯು ಜಾಸ್ತಿಯಾಗಿದೆ ಎಂದರೆ ಸರಿ. ನಾನು ಕೆಳ ನ್ಯಾಯಾಲಯದಲ್ಲಿ ಕೇಸನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಆರು ಕ್ರಯ ಪತ್ರಗಳನ್ನು ರದ್ದು ಮಾಡಬೇಕೆಂದು ನಾನು ಕೇಸು ಸಲ್ಲಿಸಿದ್ದೇನೆ. ಆರು ಕ್ರಯ ಪತ್ರಗಳಲ್ಲಿದ್ದ ಕ್ರಯದ ಹಣದ ಬಗ್ಗೆ ತಿಳಿದುಕೊಂಡಿದ್ದೇನೆ. ಸದರಿ ಕ್ರಯ ಪತ್ರಗಳನ್ನು ರದ್ದು ಮಾಡಿಕೊಳ್ಳುವ ಬಗ್ಗೆ ನ್ಯಾಯಾಲಯದ ಶುಲ್ಕ ಕಟ್ಟಿಲ್ಲ ಎಂದರೆ ಸರಿಯಲ್ಲ.

ಪಿಳ್ಳ ಮುನಿಯಮ್ಮ ಎಂದರೆ ಮುನಿಸಣ್ಣಮ್ಮನ ತಾಯಿ ಎಂದರೆ ಸರಿ. ಪಿಳ್ಳ ಮುನಿಯಮ್ಮನಿಗೆ ಇಬ್ಬರು ಮಕ್ಕಳು. ಅವರುಗಳು ಮುನಿಸಣ್ಣಮ್ಮ ಮತ್ತು ಗುಳ್ಳಪ್ಪ. ಮೂಲತಃ ದಾವಾ ಸ್ವತ್ತುಗಳು ಪಿಳ್ಳ ಮುನಿಯಮ್ಮ ರವರಿಗೆ ಹೇಗೆ ಬಂದಿವೆ ಎಂದರೆ ಸಾಕ್ಷಿಯು ಸರ್ಕಾರದಿಂದ ಗ್ರ್ಯಾಂಟ್ ಮುಖಾಂತರ ಬಂದಿದೆ ಎಂದು ನುಡಿಯುತ್ತಾರೆ.

ಸಾಕ್ಷಿಯು ಮುಂದುವರಿದು ನುಡಿಯುತ್ತಾರೆ ಅದು ಮುನಿಸಣ್ಣಮನಿಗೆ ಬಂದಂತಹ ಸ್ವತ್ತು ಪಿಳ್ಳ ಮುನಿಯಮ್ಮನಿಗೆ  ಬಂದಿದಲ್ಲ. 02.04.1945 ರಲ್ಲಿ ದಾನ ಪತ್ರದ ಮುಖಾಂತರ ಮುನಿಸಣ್ಣಮನಿಗೆ ಸ್ವತ್ತು ಬಂದಿದೆ ಎಂದು ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸರಿ. ಸದರಿ ದಾನ ಪತ್ರವನ್ನು ನೋಡಿಲ್ಲ. ಮುನಿಸಣ್ಣಮನಿಗೆ ಮಕ್ಕಳು ಇಲ್ಲ ಎಂದರೆ ಸರಿ. ಮುನಿಸಣ್ಣಮ್ಮನ ಗಂಡನ ಹೆಸರು ದಾಸಪ್ಪ. ದಾಸಪ್ಪನಿಗೆ ಅಣ್ಣ ತಮ್ಮಂದಿರು ಯಾರಿಲ್ಲ ಅವರು ನಮ್ಮ ಮನೆಯಲ್ಲಿದ್ದರು. ನಮ್ಮ ತಾತನ ಹೆಸರು ಗುಳ್ಳಪ್ಪ. ಮುನಿಸಣ್ಣಪ್ಪ ಗುಳ್ಳಪನ ತಂಗಿ. ನನ್ನ ತಂದೆಯ ಹೆಸರು ಚೆನ್ನಬೀರಪ್ಪ.

ಮೂಲವಾಗಿ ಆಸ್ತಿಯನ್ನು ಯಾರು ಮಾರಾಟ ಮಾಡಿದ್ದಾರೆ ಗೊತ್ತಿಲ್ಲ. ಚೆನ್ನಬೀರಪ್ಪ/ನನ್ನ ತಂದೆ ರವರು ನಾರಾಯಣಸ್ವಾಮಿಗೆ ಮಾರಾಟ ಮಾಡಿದ್ದಾನೆ ಎಂದು ಕೇಸು ತಂದಿದ್ದೇನೆ. ಆ ರೀತಿ ಮಾರಾಟವಾದ ಕ್ರಯ ಪತ್ರಗಳನ್ನು ನಾನು ತೆಗೆದುಕೊಂಡಿದ್ದೇನೆ. 1975-76 ರಲ್ಲಿ ಆ ರೀತಿ ಮೊದಲ ಬಾರಿಗೆ ಮಾರಾಟ ಆಗಿದೆ. ಉಳಿದ ಆಸ್ತಿಗಳನ್ನು 1992-93 ರಲ್ಲಿ ಮಾರಾಟ ಮಾಡಿದ್ದಾರೆ. ಸದರಿ ಆಸ್ತಿಗಳು ವಿಲ್ ಮುಖಾಂತರ ಬಂದಿವೆ. ಸದರಿ ವಿಲ್ ಅನ್ನು ಮೊದಲ ಬಾರಿಗೆ ಕೇಸ ಹಾಕುವ ಹಿಂದೆ ನೋಡಿದ್ದೇನೆ. ಅದಕ್ಕೆ ಮೊದಲು ನೋಡಿಲ್ಲ. ಸದರಿ ವಿಲ್ ಅನ್ನು ನನಗೆ ಯಾರು ಕೊಟ್ಟಿಲ್ಲ. ನಮ್ಮ ಅಜ್ಜಿ ಮನೆಯಲ್ಲಿ ಟ್ರಂಕ್ ಇತ್ತು ಅದರಲ್ಲಿ ಇತ್ತು. 2011 ರಲ್ಲಿ ಮೊದಲ ಬಾರಿಗೆ ವಿಲ್ ಅನ್ನು ನೋಡಿದ್ದೇನೆ. ಸದರಿ ವಿಲ್ ನ್ನು ಅಜ್ಜಿ ಬರೆದಿದ್ದಾ ಅಥವಾ ಸೃಷ್ಠಿ ಮಾಡಿದ್ದಾ ಎಂದರೆ ಸಾಕ್ಷಿಯು ನಮ್ಮ ಅಜ್ಜಿಯೇ ಬರೆಸಿದ್ದು ನಾನು

ಚಿಕ್ಕವಳಿದ್ದೆ. ಆ ರೀತಿ ವಿಲ್ ನ್ನು ಬರೆಸಿದಾಗ ನಾನು ಸಹ ಇದ್ದೆ. ಸದರಿ ವಿಲ್ ಅನ್ನು ಚಿಂತಾಮಣಿಯಲ್ಲಿ ಬರೆಸಲಾಗಿದೆ. ಚೆನ್ನಪ್ಪ ಮತ್ತು ನಂಜುಂಡಪ್ಪ ಆ ಸಮಯದಲ್ಲಿ ಇದ್ದರು. ಸ್ಟ್ಯಾಂಪ್ ಪೇಪರ್ ಅನ್ನು ಯಾರು ತಂದಿದ್ದರು ಗೊತ್ತಿಲ್ಲ. ವಿಲ್ ಪತ್ರವನ್ನು ಬರೆಸುವಾಗ ಸ್ಟ್ಯಾಂಪ್ ಪೇಪರ್ ನಲ್ಲಿ ಟ್ರೇಜುರಿ ಸಿಲ್ ಮತ್ತು ತಾರೀಖು ಇರುತ್ತದೆ ಎಂದರೆ ಸರಿ. ನಿಪಿ7 ರಲ್ಲಿ ಟ್ರೇಜುರಿ ಸಿಲ್ ಮತ್ತು ತಾರೀಖು ಇಲ್ಲ ಎಂದರೆ ಸರಿ. ಸ್ಟ್ಯಾಂಪ್ ಪೇಪರ್ ಅನ್ನು ಕೊಟ್ಟವರು ಶಿವಪ್ರಸಾದ ಅವರನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ನೋಡಿಲ್ಲ ಎಂದು ನುಡಿಯುತ್ತಾರೆ. ಅವರಿಗೆ ಈಗ 50 ವರ್ಷವಾಗಿದ್ದು ಈಗಲೂ ತಾಲ್ಲುಕು ಕಚೇರಿಯಲ್ಲಿ ಡೀಡ್ ರೈಟರ್ ಆಗಿದ್ದಾರೆ ಎಂದರೆ ಗೊತ್ತಿಲ್ಲ. ಸ್ಟ್ಯಾಂಪ್ ಪೇಪರ್ ಅನ್ನು ಕೊಟ್ಟ ಶಿವಪ್ರಸಾದ ರವರಿಗೆ 1974 ರಲ್ಲಿ 5 ವರ್ಷ ವಯಸ್ಸು ಎಂದರೆ ನನಗೆ ಗೊತ್ತಿಲ್ಲ. 1974 ರಲ್ಲಿ ಶಿವಪ್ರಸಾದ ರವರು ಸ್ಟ್ಯಾಂಪ್ ವೆಂಡರ್ ಅಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಸ್ಟ್ಯಾಂಪ್ ಪೇಪರ್ ಅನ್ನು ಈ ಕೇಸಿಗಾಗಿ ಸೃಷ್ಠಿ ಮಾಡಲಾಗಿದೆ ಎಂದರೆ ಸರಿಯಲ್ಲ. ಶಿವಪ್ರಸಾದ ರವರು ಸ್ಟ್ಯಾಂಪ್ ಪೇಪರ್ ಅನ್ನು ಕೊಟ್ಟಿಲ್ಲ ಹಾಗೂ ಸಹಿಯನ್ನು ಮಾಡಿಲ್ಲ ಎಂದರೆ ಸರಿಯಲ್ಲ, ಟ್ರೇಜುರಿ ಸೀಲ್ ಅನ್ನು ಅಳಿಸಿ ಹಿಂದಿನ ದಿನಾಂಕವನ್ನು ನಾವು ಹಾಕಿದ್ದೇವೆ ಎಂದರೆ ಸರಿಯಲ್ಲ. ವಿಲ್ ಪತ್ರವನ್ನು ಕೆ ನಾರಾಯಣರೆಡ್ಡಿ ರವರು ಬರೆದಿದ್ದಾರೆ. ಆ ರೀತಿ ಕೆ ನಾರಾಯಣರೆಡ್ಡಿ ಎನ್ನುವವರು ಯಾರು ಇಲ್ಲ ಎಂದರೆ ಸರಿಯಲ್ಲ. ಶಿಂಗನಹಳ್ಳಿ ಯ ಪಟೇಲ್ ನಾರಾಯಣರೆಡ್ಡಿ ಇದ್ದರು ಎಂದರೆ ಗೊತ್ತಿಲ್ಲ. ಶಿಂಗನಹಳ್ಳಿ ಯ ಪಟೇಲ್ ನಾರಾಯಣರೆಡ್ಡಿ

ತೀರಿಕೊಂಡ ಬಹಳ ದಿನಗಳಾಗಿವೆ ಎಂದರೆ ಸರಿ. ಸದರಿ ವಿಲ್ ನ್ನು ಯಾರು ಬರೆದಿದ್ದಾರೆ ನನಗೆ ಸರಿಯಾಗಿ ನೆನಪಿಲ್ಲ. ಶಿಂಗನಹಳ್ಳಿ ಯ ಪಟೇಲ್ ನಾರಾಯಣರೆಡ್ಡಿ ರವರು ವಿಲ್ ನಾಮೆಯನ್ನು ಬರವಣಿವಗೆ ಮಾಡಿಲ್ಲ ಮತ್ತು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

ಚಿಂತಾಮಣಿಯಿಂದ ಸಾಕ್ಷಿ ಸೊಣ್ಣಪ್ಪ ರವರ ಊರಾದ ಬೊಗರಿಬೊಮ್ಮಣಹಳ್ಳಿಗೆ 40-45 ಕಿ. ಮೀ ಇದೆ ಎಂದರೆ ಸರಿ. ಮತ್ತೊಬ್ಬ ಸಾಕ್ಷಿಯು ಸೊಣ್ಣಪ್ಪ ರವರ ಊರು ಕೋಲಾರ ಎಂದರೆ ಸರಿ. ಸದರಿ ಸೊಣ್ಣಪ್ಪ ಇದ್ದಾರೆ ಎಂದರೆ ಸರಿ. ಇನ್ನೊಬ್ಬ ಸಾಕ್ಷಿದಾರರಾದ ನಂಜುಂಡಪ್ಪ ರವರ ಊರು ಕೋಲಾರದ ಬುಟ್ಟಹಳ್ಳಿ ಎಂದರೆ ಸರಿ. ಚಿಂತಾಮಣಿಯಿಂದ ರವರ ಊರು 20-25 ಕಿ.ಮೀ. ದೂರ ಆಗುತ್ತದೆ. ಅವರು ಬದುಕಿದ್ದಾರೆ. ಪತ್ರ ಬರೆದಾಗ ನನ್ನ ತಂದೆ ಜೊತೆ ಇರಲಿಲ್ಲ. ನಾನು ಮದುವೆಯಾಗುವವರೆಗೆ ಅಜ್ಜಿಯ ಜೊತೆ ವಾಸವಿದ್ದೆ. ಆ ರೀತಿ ವಾಸವಿದ್ದೆ ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ. ನಮ್ಮ ಅಜ್ಜಿ ಸದರಿ ದಾಖಲಾತಿಯನ್ನು ಇಟ್ಟಿದ್ದಾರೆ. ಅವರು ಹೆಳಿದ್ದಾರೆ ನನಗೆ ನೆನಪಿಲ್ಲ. ಕೇಸು ಹಾಕುವ ಮೊದಲು ಅಜ್ಜಿ ಮನೆಯಲ್ಲಿ ಹುಡುಕಿದಾಗ ಸಿಕ್ಕಿದೆ. ಅಜ್ಜಿಯ ತಿಥಿಯನ್ನು ನಾವೇ ಮಾಡಿರುತ್ತೇವೆ. ನನ್ನ ತಂದೆ ಮತ್ತು ನನ್ನ ಅಣ್ಣ ಸೇರಿ ಆಸ್ತಿಯನ್ನು ಮಾರಾಟ ಮಾಡಿದ್ದಾರೆ.

ನನ್ನ ತಂದೆ ಮತ್ತು ನನ್ನ ಅಣ್ಣ ಆಸ್ತಿಯನ್ನು ಮಾರಾಟ ಮಾಡಿದ ವಿಚಾರ ನನಗೆ ಗೊತ್ತಿರಲಿಲ್ಲ. 2010 ರಲ್ಲಿ ಪಹಣಿಯನ್ನು ನೋಡಿದಾಗ ನನ್ನ ತಂದೆಯು 1

ಎಕರೆ ಮಾರಾಟ ಮಾಡಿರುವ ಬಗ್ಗೆ ಗೊತ್ತಾಗಿದೆ. ಪಿ ನಾಗೇಶ್ ಬಿನ್ ಟಿ. ಪಿ. ವೆಂಕಟೇಶ್ ರವರ ಮೇಲೆ ಕೇಸು ಹಾಕಿಲ್ಲ. ಯಾರ ಮೇಲೆ ದಾವೆ ಹಾಕಿದ್ದೇನೆ ತಿಳಿದುಕೊಂಡಿದ್ದೇನೆ. 5 ನೇ ಪ್ರತಿವಾದಿಯನ್ನು ನಾನು ತಿಳಿದುಕೊಂಡಿದ್ದೇನೆ.

ವೆಂಕಟರಾಯಪ್ಪ ಜಯರಾಮರವರಿಗೆ ದಿಃ02.05.1975 ಹಾಗೂ 28.01.1993 ರಲ್ಲಿ ಕ್ರಯ ಪತ್ರವನ್ನು ನನ್ನ ತಂದೆ ಮತ್ತು ಅಣ್ಣ ಮಾಡಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.